ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
**Karnataka School Quality Assessment & Accreditation Council**
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ದೂರವಾಣಿ ಸಂಖ್ಯೆ:080-23341615, 23562283, 29720300
e-mail: ksqaacbangalore@gmail.com, ksqaacbengaluru@gmail.com

ಸಂಖ್ಯೆ:K1/External ಲೆಕ್ಕ ಆಡಿಟ್/11 /2023-24 ದಿನಾಂಕ:09.10.2023

## ದರಪಟ್ಟಿ ಆಹ್ವಾನ

**ವಿಷಯ: ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಯ ರಾಜ್ಯ ವಲಯ ಹಾಗೂ ಎಸ್.ಎಸ್.ಕೆ ಅನುದಾನಗಳ External Audit ಮಾಡಲು ದರಪಟ್ಟಿ ಆಹ್ವಾನಿಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೆ.ಎಸ್.ಕ್ಯು.ಎ.ಎ.ಸಿ. ಕಛೇರಿಯ ರಾಜ್ಯ ವಲಯ ಮತ್ತು ಎಸ್.ಎಸ್.ಕೆ ಅನುದಾನದ 2022–23 ಸಾಲಿನವರೆಗಿನ ಲೆಕ್ಕ ಪತ್ರಗಳನ್ನು Audit ಮಾಡಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ.

| ವಿಷಯ | ದಾಖಲೆಗಳನ್ನು ಪರಿಶೀಲಿಸ ಬೇಕಾದ ಅವಧಿ | ವಾರ್ಷಿಕ ವಹಿವಾಟು | | | ಲೆಕ್ಕಪರಿಶೋಧ ಕಾರ್ಯ ಪೂರ್ಣಗೊಳಿಸ ಬೇಕಾದ ಅವಧಿ | ಲೆಕ್ಕಪರಿಶೋಧ ಕಾರ್ಯ ಪೂರ್ಣಗೊಳಿಸಿ ವರದಿ ನೀಡ ಬೇಕಾದ ಅವಧಿ | ಲೆಕ್ಕಪರಿಶೋಧನೆ ಕಾರ್ಯ ನಿರ್ವಹಿಸಬೇಕಾದ ಸ್ಥಳ |
|---|---|---|---|---|---|---|---|
| | | ರಾಜ್ಯ ವಲಯ ಅನುದಾನದ ಖರ್ಚು (ರೂ.ಗಳಲ್ಲಿ) | ಎಸ್.ಎಸ್.ಕೆ. ಅನುದಾನದ ಖರ್ಚು (ರೂ.ಗಳಲ್ಲಿ) | K2 ಅನುದಾನದ ಖರ್ಚು (ರೂ.ಗಳಲ್ಲಿ) | | | |
| ಲೆಕ್ಕಪರಿಶೋಧನೆ ಕಾರ್ಯ ರಾಜ್ಯ ವಲಯ ಅನುದಾನ ಮತ್ತು ಎಸ್.ಎಸ್.ಕೆ. ಅನುದಾನ | 2022-23 (ಮಾರ್ಚ್ ವರೆಗೆ) | 7,35,92,231.00 | 87,08,289.00 | 49,57,532.00 | ಕಾರ್ಯಾದೇಶ ಪಡೆದ ದಿನಾಂಕದಿಂದ ಗರಿಷ್ಠ 15 ದಿನಗಳು | ಗರಿಷ್ಠ 10 ದಿನಗಳು | ಕೆ.ಎಸ್.ಕ್ಯು.ಎ.ಎ.ಸಿ. ಕಛೇರಿ, ಕೆ.ಎಸ್.ಇ.ಎ.ಬಿ. 6ನೇ ಅಡ್ಡ ರಸ್ತೆ ಮಲ್ಲೇಶ್ವರಂ, ಬೆಂಗಳೂರು |

**ಷರತ್ತುಗಳು:**

a) ಈ ಪತ್ರದೊಂದಿಗೆ ಲಗತ್ತಿಸಲಾಗಿರುವ ನಮೂನೆ **ಮಾದರಿಯಲ್ಲಿಯೇ** ದರಪಟ್ಟಿ ನೀಡತಕ್ಕದ್ದು.

b) ರಾಜ್ಯ ವಲಯ ಮತ್ತು ಎಸ್.ಎಸ್.ಕೆ ಅನುದಾನಕ್ಕೆ ಸಂಬಂಧಪಟ್ಟಂತೆ 2022–23 ನೇ ಸಾಲಿನ ಲೆಕ್ಕಪತ್ರಗಳನ್ನು ಪರಿಶೀಲಿಸುವುದು ನಮೂದಿತ ದರವು ಎಲ್ಲಾ ತರದ ತೆರಿಗೆಗಳು (ಜಿ.ಎಸ್.ಟಿ. ಇನ್ನಿತರ ತೆರಿಗೆ) ಸೇರಿದಂತೆ ನೀಡುವುದು.

c) ದರಪಟ್ಟಿ ನೀಡುವ ಸಂಸ್ಥೆಯವರು ಜಿ.ಎಸ್.ಟಿ. ದಾಖಲಾತಿ ಪ್ರಮಾಣ ಪತ್ರವನ್ನು ದರಪಟ್ಟಿಯೊಂದಿಗೆ ಸಲ್ಲಿಸುವುದು.

d) ಒಂದು ಸಂಸ್ಥೆಯವರು ಒಂದೇ ದರಪಟ್ಟಿಯನ್ನು ನೀಡುವುದು.

e) ಅತ್ಯಂತ ಕಡಿಮೆ ದರ ನಮೂದಿಸಿದ ಸಂಸ್ಥೆಗೆ Audit ಮಾಡಲು ಆದೇಶ ನೀಡಲಾಗುವುದು.

f) "External Audit ಕಾರ್ಯಕ್ಕಾಗಿ ಅವಶ್ಯಕವಿರುವ ಮಾನವ ಸಂಪನ್ಮೂಲ ಹಾಗೂ ಸಾಮಗ್ರಿಗಳನ್ನು ತಮ್ಮ ಸಂಸ್ಥೆಯಿಂದಲೇ ಒದಗಿಸಿಕೊಳ್ಳತಕ್ಕದ್ದು. ಹಾಗೂ ಕೆ.ಎಸ್.ಕ್ಯು.ಎ.ಎ.ಸಿ. ಕಛೇರಿಯಿಂದ ಯಾವುದೇ ಪ್ರಯಾಣ ಭತ್ಯೆ, ದಿನಭತ್ಯೆಯನ್ನು ಸಂಭಾವನೆಯನ್ನು ವಿತರಿಸಲಾಗುವುದಿಲ್ಲ.

g) ನಿಗದಿಪಡಿಸಿದ ಅವಧಿಯೊಳಗೆ ಕಾರ್ಯವನ್ನು ಪೂರ್ಣಗೊಳಿಸಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ಒಂದು ವೇಳೆ ನಿಗಧಿತ ಸಮಯಕ್ಕೆ ಗರಿಷ್ಟ 10 ದಿನಗಳ ನಂತರ 30 ದಿನಗಳ ಒಳಗೆ ವರದಿಯನ್ನು ಸಲ್ಲಿಸದಿದ್ದಲ್ಲಿ ಬಿಲ್ಲಿನ ಒಟ್ಟು ಮೊತ್ತದಲ್ಲಿ 5% ರಂತೆ, 30 ದಿನಗಳ ನಂತರ 50 ದಿನಗಳ ಒಳಗೆ ವರದಿಯನ್ನು ಸಲ್ಲಿಸದಿದ್ದಲ್ಲಿ, ಬಿಲ್ಲಿನ ಒಟ್ಟು ಮೊತ್ತದಲ್ಲಿ 10% ರಂತೆ, 50 ದಿನಗಳ ನಂತರ ವರದಿಯನ್ನು ಸಲ್ಲಿಸದಿದ್ದಲ್ಲಿ ಬಿಲ್ಲಿನ ಒಟ್ಟು ಮೊತ್ತದಲ್ಲಿ 15% ರಂತೆ ದಂಡವಿಧಿಸಲಾಗುವುದು.

h) ದರಪಟ್ಟಿಯಲ್ಲಿ ಒಪ್ಪಿಗೆಯಾದ ಸಂಸ್ಥೆಯು ಭದ್ರತಾ ಠೇವಣಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯು.ಎ.ಎ.ಸಿ. ರವರ ಹೆಸರಿಗೆ ಬ್ಯಾಂಕ್ ಹುಂಡಿಯನ್ನು ಕೆ.ಎಸ್.ಕ್ಯು.ಎ.ಎ.ಸಿ.ಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವಾಗ ನೀಡುವುದು.

i) ದರಪಟ್ಟಿಯಲ್ಲಿ ಒಪ್ಪಿಗೆಯಾದ ಸಂಸ್ಥೆಯು ರೂ.200/–ಗಳ ಛಾಪಾ ಕಾಗದದಲ್ಲಿ ಕಾರ್ಯಾದೇಶ ಪಡೆಯುವಾಗ ಕರಾರು ಒಪ್ಪಂದ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

j) ಕಾರ್ಯ ಪೂರ್ಣಗೊಂಡ ನಂತರ ಬಿಲ್ಲನ್ನು ನೀಡಿದ ಮೇಲೆ ನಿಯಮಾನುಸಾರ ಪರಿಶೀಲಿಸಿ ಪಾವತಿಗೆ ಕ್ರಮವಹಿಸಲಾಗುವುದು.

k) ಈ ವ್ಯವಹಾರದಲ್ಲಿ ಯಾವುದೇ ವ್ಯಾಜ್ಯಗಳು ಉದ್ಭವಿಸಿದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿಯೇ ಬಗೆಹರಿಸಿಕೊಳ್ಳತಕ್ಕದ್ದು.

ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕೊಟೇಷನ್ ಸಲ್ಲಿಸಲು ಇಚ್ಛಿಸುವವರು **ದಿನಾಂಕ:26/10/2023ರೊಳಗೆ** ಸೀಲು ಮಾಡಿದ ಲಕೋಟೆಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್‌ಕ್ಯು.ಎ.ಎ.ಸಿ. ಕೆಎಸ್.ಇ.ಎ.ಬಿ. ಮ್ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಹಾಗೂ ಲಕೋಟೆಯ ಮೇಲೆ **"Audit ಕಾರ್ಯಕ್ಕಾಗಿ ದರಪಟ್ಟಿ"** ಎಂಬುದಾಗಿ ನಮೂದಿಸುವುದು. ಹೆಚ್ಚಿನ ಮಾಹಿತಿಯನ್ನು ಕೆ.ಎಸ್‌ಕ್ಯು.ಎ.ಎ.ಸಿ. ಕಛೇರಿ ವತಿಯಿಂದ ಪಡೆಯಬಹುದಾಗಿದೆ.

ಲಗತ್ತು : ದರಪಟ್ಟಿ ನಮೂನೆ

10/10/2023
ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯೂ.ಎ.ಎ.ಸಿ

**ಪ್ರತಿಗಳು:**

1. ಕೆ.ಎಸ್.ಕ್ಯು.ಎ.ಎ.ಸಿ.ಯ ಸೂಚನಾ ಫಲಕಕ್ಕೆ
2. ಕಛೇರಿ ಪ್ರತಿ.

# ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

**Karnataka School Quality Assessment & Accreditation Council**

ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ದೂರವಾಣಿ ಸಂಖ್ಯೆ:080–23341615, 23562283

e-mail: ksqaacbangalore@gmail.com, ksqaacbengaluru@gmail.com


## ದರಪಟ್ಟಿ ನಮೂನೆ

| ಕ್ರ.ಸಂ | ನಿರ್ವಹಿಸಬೇಕಾದ ಕಾರ್ಯ | ದಾಖಲೆಗಳನ್ನು ಪರಿಶೀಲಿಸಬೇಕಾದ ಅವಧಿ ಸರಾಸರಿ ವಾರ್ಷಿಕ ವಹಿವಾಟು | ಲೆಕ್ಕಪರಿಶೋಧ ಕಾರ್ಯ ಪೂರ್ಣಗೊಳಿಸ ಬೇಕಾದ ಅವಧಿ (ಕಾರ್ಯಾದೇಶ ನೀಡಿದ ದಿನಾಂಕದಿಂದ) | ಸೂಚಿಸಿದ ವರ್ಷದ ದಾಖಲೆಗಳನ್ನು ಪರಿಶೀಲಿಸಿ ಆರ್ಥಿಕ ವರದಿ ನೀಡಲು ತಗಲುವ ವೆಚ್ಚ ರೂ ಗಳಲ್ಲಿ (ಎಲ್ಲಾ ತೆರಿಗೆಗಳು ಸೇರಿದಂತೆ) | ಒಟ್ಟು ಮೊತ್ತ ರೂ (ಅಕ್ಷರಗಳಲ್ಲಿ ಮತ್ತು ಸಂಖ್ಯೆ ಗಳಲ್ಲಿ) | ಷರಾ |
|---|---|---|---|---|---|---|
| 1 | ರಾಜ್ಯ ವಲಯ ಅನುದಾನದ ಲೆಕ್ಕಪರಿಶೋಧನೆ ಕಾರ್ಯ | 2022-23 | ಗರಿಷ್ಠ 15 ದಿನಗಳು | | | |
| | ಎಸ್.ಎಸ್.ಕೆ. ಅನುದಾನದ ಲೆಕ್ಕಪರಿಶೋಧನೆ ಕಾರ್ಯ | 2022-23 | | | | |

**ಷರಾ:**

1. ರಾಜ್ಯ ವಲಯ ಮತ್ತು ಎಸ್.ಎಸ್.ಕೆ ಅನುದಾನಕ್ಕೆ ಸಂಬಂಧಪಟ್ಟಂತೆ 2022-23 ನೇ ಸಾಲಿನ ಲೆಕ್ಕಪತ್ರಗಳನ್ನು ಮಾತ್ರ ಪರಿಶೀಲಿಸುವುದು.
2. ಲೆಕ್ಕ ಪರಿಶೋಧನಾ ಕಾರ್ಯ ಪೂರ್ಣಗೊಂಡ ನಂತರ ಗರಿಷ್ಠ 10 ದಿನಗಳೊಳಗೆ ವರದಿಯನ್ನು ನೀಡುವುದು.
3. ಲೆಕ್ಕಪರಿಶೋಧನೆಯನ್ನು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ಕೆ.ಎಸ್.ಇ.ಎ.ಬಿ ಕಟ್ಟಡ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03.

ನಮೂದಿತ ಎಲ್ಲಾ ಷರತ್ತುಗಳನ್ನು ಒಪ್ಪಿ ಕಾರ್ಯವನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಲು ಒಪ್ಪಿರುತ್ತೇವೆ.

**Date:**

**Tenderer:**

**Name:**

**Signature:**